KAGD040016832023

**1ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ 1ನೇ ನ್ಯಾಯಾಲಯ, ಗದಗ**

ಉಪಸ್ಥಿತರು:- ಶ್ರೀಮತಿ. ದೀಪ್ತಿ ನಾಡಗೌಡ
ಬಿ.ಕಾಮ್, ಎಲ್.ಎಲ್.ಬಿ.,
1 ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. 1 ನೇ ನ್ಯಾಯಾಲಯ, ಗದಗ

**ದಿನಾಂಕ 05ನೇ ನವೆಂಬರ್ 2024**

**ಸಿ.ಸಿ. ನಂ.1287/2023**

| | | |
|---|---|---|
| ಫಿರ್ಯಾದುದಾರರು | : | ಸರ್ಕಾರದ ಪರವಾಗಿ ಅಬಕಾರಿ ಉಪನಿರೀಕ್ಷಕರು, ಗದಗ<br><br>(ಸಹಾಯಕ ಸರ್ಕಾರಿ ಅಭಿಯೋಜಕರು) |
| | | ವಿರುದ್ಧ |
| ಆರೋಪಿತರು | :1. | ಸಂದೀಪ ತಂದೆ ಶಿವಾನಂದ ಚೆನ್ನೂರ<br>ವಯಾಃ 24 ವರ್ಷ, ಉಃ ಕೂಲಿ,<br>ಸಾಃ ಸ್.ಎಂ.ಕೃಷ್ಣಾ ನಗರ,<br>ಬೆಟಗೇರಿ, ತಾಃ ಜಿಃ ಗದಗ. |
| | 2. | ಶ್ರೀಮತಿ. ಪದ್ಮಾ ಬಿ ಬೆಳದಡಿ<br>ಸಾಃ ಜವಳಗಲ್ಲಿ, ಗಂಗಾಪುರ ಪೇಟೆ, ತಾಃ ಜಿಃ ಗದಗ.<br><br>(1 ನೇ ಆರೋಪಿ ಪರ ಶ್ರೀ.ಐ.ಎ.ಬಿ, ವಕೀಲರು)<br><br>(2 ನೇ ಆರೋಪಿ ಪರ ಶ್ರೀ.ಟಿ.ಎನ್.ಬಿ, ವಕೀಲರು) |

| | | |
|---|---|---|
| 1. ಅಪರಾಧ ನಡೆದ ದಿನಾಂಕ | : | 25.04.2023 |
| 2.ಅಪರಾಧ ವರದಿ ಆದ ದಿನಾಂಕ | : | 25.04.2023 |
| 3. ಪಿರ್ಯಾದುದಾರರರ ಹೆಸರು | : | ಶಹನಾಜ ಬೇಗಂ ವೈ.ಕೆ ಬಡಗೇರಿ,<br>ಅಬಕಾರಿ ನಿರೀಕ್ಷಕರು |

KAGD040016832023

CC No.1287/2023

| | |
|---|---|
| 4. ಸಾಕ್ಷ್ಯ ಪ್ರಾರಂಭವಾದ ದಿನಾಂಕ | ಃ 05.08.2024 |
| 5. ತೀರ್ಮಾನವಾದ ದಿನಾಂಕ | ಃ 05.11.2024 |
| 6.ಆರೋಪಿತನ ಮೇಲೆ ಹೊರಿಸಲಾದ ಅಪರಾಧ | ಃ ಕರ್ನಾಟಕ ಅಬಕಾರಿ ಕಾಯ್ದೇ ಕಲಂ 32(1) ಮತ್ತು 38(ಎ) ರಡಿಯಲ್ಲಿ. |
| 7.ನ್ಯಾಯಾಧೀಶರ ಅಭಿಪ್ರಾಯ | ಃ 1 ಮತ್ತು 2 ನೇ ಆರೋಪಿತರನ್ನು ಬಿಡುಗಡೆ ಮಾಡಲಾಗಿದೆ. |

**:: ತೀರ್ಪು ::**

ಈ ಪ್ರಕರಣವನ್ನು ಗದಗ ಅಬಕಾರಿ ವಲಯದ ಅಬಕಾರಿ ನೀರಿಕ್ಷಕರು 1 ಮತ್ತು 2 ನೇ ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೇ ಕಲಂ 32(1) ಮತ್ತು 38(ಎ) ರಡಿ ಶಿಕ್ಷಾರ್ಹವಾದ ಅಪರಾಧಗಳನ್ನು ಮಾಡಿದ್ದಾರೆ ಎಂದು ಸಲ್ಲಿಸಿದ ದೋಷಾರೋಪಣಾ ಪಟ್ಟಿಯ ಆಧಾರದ ಮೇಲೆ ದಾಖಲಿಸಿಕೊಳ್ಳಲಾಗಿರುತ್ತದೆ.

2. **ಅಭಿಯೋಜನೆಯವರ ಪ್ರಕರಣದ ಸಂಕ್ಷಿಪ್ತ ವಿವರ ಏನೆಂದರೆಃ-**

ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆ-2023 ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಸಮಯದಲ್ಲಿ ದಿನಾಂಕ 25.04.2023 ರಂದು ಗದಗ ವಿಧಾಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗದಗ ಬೆಟಗೇರಿ ಶಹರದ ಗಂಗಾಪೂರ ಬಸ್ ನಿಲ್ದಾಣದ ಹತ್ತಿರ ರಸ್ತೆಗಾವಲು ನಿರ್ವಹಿಸುತ್ತಿರುವಾಗ ಮಧ್ಯಾಹ್ನ 12-30 ಗಂಟೆಯ ಸುಮಾರಿಗೆ 1 ನೇ ಆರೋಪಿತನು ನೋಂದಣಿ ಸಂಖ್ಯೆ ನಮೂದು ಇಲ್ಲದ ಬ್ರೌನ್ ಬಣ್ಣದ ಹೊಂಡಾ ಕಂಪನಿಯ AVIATOR ದ್ವಿ ಚಕ್ರದ ವಾಹನ ಇಂಜಿನ್ ನಂJF21E9189258 ನೇದ್ದರಲ್ಲಿ ಅಕ್ರಮವಾಗಿ ರೂ 3513/- ಮೌಲ್ಯದ 09 ಲೀಟರ್ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಮದ್ಯವನ್ನು ಹೋದಿ ಸಾಗಾಟ ಮಾಡುತ್ತಿದ್ದಾಗ ಸಿಕ್ಕಿದ್ದು, ಸದರಿ ವಾಹನದ ಮಾಲೀಕಳಾದ 2 ನೇ ಆರೋಪಿತಳು ಸದರಿ ವಾಹನವನ್ನು ಕೃತ್ಯಕ್ಕೆ ಉಪಯೋಗಿಸಲು ಕೊಟ್ಟಿದ್ದು, ಆ

ಮೂಲಕ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ರಡಿಯಲ್ಲಿ ಅಪರಾಧ ಎಸಗಿದ್ದಾರೆಂದು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆ.

3. ದೂರುದಾರಾದ ಚಾಸಾ-1 ರವರು ಸ್ಥಳದಲ್ಲಿ 1 ನೇ ಆರೋಪಿಯನ್ನು ದಸ್ತಗೀರ್ ಮಾಡಿ ದಿನಾಂಕ 25.04.2023 ಸಂಜೆ 06-25 ಗಂಟೆ ಸುಮಾರಿಗೆ 1 ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದು, 1 ನೇ ಆರೋಪಿಯನ್ನು ದಿನಾಂಕ 26.04.2023 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ಇರುತ್ತದೆ. ನಂತರ ದಿನಾಂಕ 25.04.2023 ರಂದು 1 ನೇ ಆರೋಪಿಯ ಪರ ಶ್ರೀ.ಐ.ಎ.ಬೇಪಾರಿ ವಕೀಲರು ಹಾಜರಾಗಿ ಜಾಮೀನು ಅರ್ಜಿ ಸಲ್ಲಿಸಿದ್ದು ದಿನಾಂಕ 28.04.2023 ರಂದು 1 ನೇ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು ಇರುತ್ತದೆ. ಆ ನಂತರ ಚಾಸಾ-8 ರವರು ತನಿಖೆ ಕೈಗೊಂಡು 1 ಮತ್ತು 2 ನೇ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ.

4. ನಂತರ 1 ಮತ್ತು 2 ನೇ ಆರೋಪಿತರಿಗೆ ಸಮನ್ಸ್ ಜಾರಿ ಮಾಡಿದ್ದು, 1 ಮತ್ತು 2 ನೇ ಆರೋಪಿತರು ತಮ್ಮ ವಕೀಲರ ಮೂಲಕ ಹಾಜಾರಾಗಿರುತ್ತಾರೆ. ನಂತರ ದಿನಾಂಕ 06.11.2023 ರಂದು 2 ನೇ ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು ಇರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿ ಅವಶ್ಯವಿರುವಂತೆ ದೋಷಾರೋಪಣ ಪತ್ರದ ಪ್ರತಿಯನ್ನು ಆರೋಪಿತನಿಗೆ ಪೂರೈಸಿ, 1 ಮತ್ತು 2 ನೇ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ದೋಷಾರೋಪಣೆಯನ್ನು ನಿರೂಪಿಸಿ 1 ಮತ್ತು 2 ನೇ ಆರೋಪಿತರಿಗೆ ಓದಿ ಹೇಳಿ ವಿವರಿಸಲಾಗಿ ಸದರಿ 1 ಮತ್ತು 2 ನೇ ಆರೋಪಿತರು ತಪ್ಪು ಒಪ್ಪಿಕೊಳ್ಳದೇ, ವಿಚಾರಣೆಯಾಗಬೇಕೆಂದು ಕೋರಿಕೊಂಡಿರುತ್ತಾರೆ.

5. 1 ಮತ್ತು 2 ನೇ ಆರೋಪಿತರ ವಿರುದ್ಧ ಅಪರಾಧವನ್ನು ರುಜುವಾತು ಪಡಿಸಲು ಅಭಿಯೋಜನೆಯವರ ಪರವಾಗಿ ಸಾಕ್ಷಿದಾರರನ್ನು ಪ್ರಾ.ಸಾ.1 ರಿಂದ 5 ರಂತೆ ವಿಚಾರಣೆ ಮಾಡಲಾಗಿದೆ, ಹಾಗೂ ನಿಪಿ-1 ರಿಂದ 16 ಎಂದು ದಸ್ತಾವೇಜುಗಳನ್ನು ಮತ್ತು ಟೆಟ್ರಾ ಪ್ಯಾಕೇಟುಗಳನ್ನು ಮು.ಮಾ 1 ಎಂದು ಗುರುತಿಸಲಾಗಿದೆ.

**6.** ಅಭಿಯೋಜನೆಯ ಸಾಕ್ಷ್ಯ ಮುಗಿದ ನಂತರ, 1 ಮತ್ತು 2 ನೇ ಆರೋಪಿತರ ವಿರುದ್ದ ಅಪರಾಧ ಸೂಚಿಸುವ ಹೇಳಿಕೆಗಳನ್ನು ಅವರಿಗೆ ವಿವರಿಸಿ ಹೇಳುವ ಮೂಲಕ ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅಡಿಯಲ್ಲಿ ಹೇಳಿಕೆಯನ್ನು ಪಡೆದುಕೊಂಡಿದ್ದು, ಸದರಿ 1 ಮತ್ತು 2 ನೇ ಆರೋಪಿತರು ಸದರಿ ಹೇಳಿಕೆಗಳನ್ನು ನಿರಾಕರಿಸಿದ್ದು ತಮ್ಮ ಪರ ಪ್ರತಿ ರಕ್ಷಣೆಯ ಸಾಕ್ಷ್ಯ ಇಲ್ಲ ಎಂದು ನುಡಿದಿರುತ್ತಾರೆ.

**7.** ಆನಂತರ ಉಭಯ ಪಕ್ಷಗಾರರ ವಾದ-ವಿವಾದಗಳನ್ನು ಆಲಿಸಿ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳನ್ನು ತೀರ್ಮಾನಿಸುವುದು ಅವಶ್ಯಕ ಎಂದು ಕಂಡುಬರುತ್ತದೆ.

1. ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆ-2023 ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಸಮಯದಲ್ಲಿ ದಿನಾಂಕ 25.04.2023 ರಂದು ಗದಗ ವಿಧಾಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗದಗ ಬೆಟಗೇರಿ ಶಹರದ ಗಂಗಾಪೂರ ಬಸ್ ನಿಲ್ದಾಣದ ಹತ್ತಿರ ರಸ್ತೆಗಾವಲು ನಿರ್ವಹಿಸುತ್ತಿರುವಾಗ ಮಧ್ಯಾಹ್ನ 12-30 ಗಂಟೆಯ ಸುಮಾರಿಗೆ 1 ನೇ ಆರೋಪಿತನು ನೋಂದಣಿ ಸಂಖ್ಯೆ ನಮೂದು ಇಲ್ಲದ ಬ್ರೌನ್ ಬಣ್ಣದ ಹೊಂಡಾ ಕಂಪನಿಯ AVIATOR ದ್ವಿ ಚಕ್ರದ ವಾಹನ ಇಂಜಿನ್ ನಂ.JF21E9189258 ನೇದ್ದರಲ್ಲಿ ಅಕ್ರಮವಾಗಿ ರೂ 3513/- ಮೌಲ್ಯದ 09 ಲೀಟರ್ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಮದ್ಯವನ್ನು ಹೋದಿ ಸಾಗಾಟ ಮಾಡುತ್ತಿದ್ದಾಗ ಸಿಕ್ಕಿದ್ದು, ಸದರಿ ವಾಹನದ ಮಾಲೀಕಳಾದ 2 ನೇ ಆರೋಪಿತಳು ಸದರಿ ವಾಹನವನ್ನು ಕೃತ್ಯಕ್ಕೆ ಉಪಯೋಗಿಸಲು ಕೊಟ್ಟಿದ್ದು, ಆ ಮೂಲಕ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ರಡಿಯಲ್ಲಿ ಶಿಕ್ಷಾರ್ಹ ಹಾಗೂ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ?

2. ಯಾವ ಆದೇಶ?

**8.** ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆ:

ಅಂಶ 1: ನಕಾರಾತ್ಮಕವಾಗಿ
ಅಂಶ 2: ಅಂತಿಮ ಆದೇಶದಂತೆ ಈ ಕೆಳಕಾಣಿಸಿದ ಕಾರಣಗಳಿಗಾಗಿ:

**<u>ಕಾರಣಗಳು</u>**

**9.** **<u>ಅಂಶ 1</u>** : **1** ಮತ್ತು **2** ನೇ ಆರೋಪಿತರು ಕರ್ನಾಟಕ ಅಬಕಾರಿ ಕಾಯ್ದೆ ಕಲಂ **32(1)** ಮತ್ತು **38(ಎ)** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆಂದು ಗದಗ ಅಬಕಾರಿ ವಲಯದ ಅಬಕಾರಿ ನಿರೀಕ್ಷಕರು ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅಭಿಯೋಜನೆಯು ಸದರಿ ಆರೋಪವನ್ನು ಸಾಭೀತು ಪಡಿಸಲು ತಮ್ಮ ಪರವಾಗಿ 6 ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

**10.** ದೂರುದಾರರಾದ ಚಾಸಾ-1 ಅಬಕಾರಿ ನಿರೀಕ್ಷಕರನ್ನು ಪ್ರಾಸಾ-3, ಪಂಚರಾದ ಚಾಸಾ-2 ಮತ್ತು 3 ರವರನ್ನು ಪ್ರಾಸಾ-1 ಮತ್ತು 2, ದಾಳಿಯಲ್ಲಿ ಪಾಲ್ಗೊಂಡ ಚಾಸಾ-4 ಅಬಕಾರಿ ಪೇದೆ ಪ್ರಾಸಾ-4, ತನಿಖಾಧಿಕಾರಿಯಾದ ಚಾಸಾ-9 ಅಬಕಾರಿ ನಿರೀಕ್ಷಕರನ್ನು ಪ್ರಾಸಾ-5 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ.

**11.** ದೂರುದಾರರಾದ ಪ್ರಾಸಾ-3 ಶಹನಾಜ ಬೇಗಂ ವೈ.ಕೆ ವಡಗೇರಿ ಅಬಕಾರಿ ನಿರೀಕ್ಷಕರಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:25-04-2023 ರಂದು ವಿಧಾನಸಭಾ ಚುನಾವಣೆ ನಿಮಿತ್ಯ ನೀತಿ ಸಂಹಿತೆ ಜಾರಿಯಲ್ಲಿದ್ದಾಗ ಮೇಲಾಧಿಕಾರಿಗಳ ಆದೇಶದ ಮೇರೆಗೆ ಅಪರಾಧ ಪತ್ತೆ ಹಚ್ಚುವ ನಿಟ್ಟಿನಲ್ಲಿ ಮುಂಜಾನೆ 11-30 ಗಂಟೆ ಸುಮಾರಿಗೆ ಸಿಬ್ಬಂದಿಗಳಾದ ಚಾಸಾ-4, 5 ರವರೊಂದಿಗೆ ಕೂಡಿ ಸರ್ಕಾರಿ ವಾಹನ ನಂ. ಕೆಎ-26-ಜಿ-0391 ನೇದ್ದಲ್ಲಿ ಗದಗ ಬೆಟಗೇರಿಯಲ್ಲಿ ಗಸ್ತು ಮಾಡುತ್ತಿರುವಾಗ ಬೆಳಗ್ಗೆ 11-45-ಗಂಟೆಗೆ ಬಾತ್ಮಿ ಬಂದಿದ್ದು, ಗಂಗಾಪೂರ ಪೇಟೆಯಲ್ಲಿ 1 ನೇ ಆರೋಪಿ ಸಂದೀಪ ಶಿವಾನಂದ ಚೆನ್ನೂರ ಎಂಬುವವನು ಅಕ್ರಮವಾಗಿ ತನ್ನ ದ್ವಿಚಕ್ರ ವಾಹನದಲ್ಲಿ ಮದ್ಯ ಸಾಗಾಟ ಮಾಡುತ್ತಿರುವ ಕುರಿತು ಬಾತ್ಮಿ ಬಂದ ಮೇರೆಗೆ ಗಾಂಧಿ ನಗರ ಬಸ್ಸ ನಿಲ್ದಾಣದ ಹತ್ತಿರ ನಿಂತಿದ್ದ ಚಾಸಾ-2 ಮತ್ತು 3 ಇಬ್ಬರು ಪಂಚರನ್ನು ಕರೆಸಿ, ಅವರಿಗೆ ಬಾತ್ಮಿ ಸಂಗತಿ ತಿಳಿಸಿ ಪಂಚರಾಗಿ ಸಹಕರಿಸಲು

ಕೋರಿದಾಗ ಸದರಿಯವರು ಒಪ್ಪಿ ಸದರಿಯವರಿಗೆ ಪಂಚರ ನೋಟಿಸು ನೀಡಲಾಯಿತು. ಪಂಚರೊಂದಿಗೆ ಸೇರಿಕೊಂಡು ಬಾತ್ಮಿ ಬಂದ ಸ್ಥಳವಾದ ಗಂಗಾಪೂರ ಪೇಟೆ ಬಸ್ಸ ನಿಲ್ದಾಣದ ಹತ್ತಿರ 12-00 ಗಂಟೆಗೆ ರಸ್ತೆ ಗಾವಲು ನಿರ್ವಹಿಸುತ್ತಿರುವಾಗ ಗಂಗಾಪೂರ ಪೇಟೆಯಿಂದ ಒಂದು ದ್ವಿಚಕ್ರ ವಾಹನ ಅವರ ಹತ್ತಿರ ಬರುತ್ತಿದ್ದು ಸದರಿ ವಾಹನ ತಡೆದು ನಿಲ್ಲಿಸಲು ಪ್ರಯತ್ನಿಸುತ್ತಿದ್ದಂತೆ ವಾಹನ 1 ನೇ ಆರೋಪಿ ಓಡಲು ಪ್ರಯತ್ನಿಸುತ್ತಿರುವಾಗ ಅವರನ್ನು ಸಿಬ್ಬಂದಿಯವರು ಹಿಡಿದು ತಡೆದು ನೀಲ್ಲಿಸಿದರು. ಸದರಿ ವಾಹನ ತಪಾಸಣೆ ಮಾಡುವ ಅವಶ್ಯಕತೆ ಕಂಡು ಬಂದಿದ್ದರಿಂದ ಸ್ಥಳದಲ್ಲಿ ಪಂಚರ ಸಮಕ್ಷಮ ಶೋಧನಾ ಸಮುಚ್ಚಿತ ಆಧಾರ ತಯಾರಿಸಿಕೊಂಡು ಸದರಿ ವಾಹನ ತಪಾಸಣೆ ಮಾಡಲು ಪ್ರಾರಂಬಿಸಿದಾಗ ಸದರಿ ವಾಹನದಲ್ಲಿ 1-ಗೊಬ್ಬರ ಚೀಲ ಇತ್ತು ಅದನ್ನು ತೆಗೆದು ನೋಡಿದಾಗ ಅದರಲ್ಲಿ 90 ಎಂ.ಎಲ್ ನ 5-ಹೈವರ್ಡ್ಸ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕೇಟುಗಳು ಹಾಗೂ 90 ಎಂ.ಎಲ್ ನ ಓರಿಜನಲ್ ಚಾಯ್ಸು 50 ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡು ಬಂದಿತು. ಸದರಿ ದ್ವಿಚಕ್ರ ವಾಹನದ ನಂಬರ ನಮೂದು ಇಲ್ಲದ ಕಾರಣ ಬಜಾಜ ಕಂಪನಿಯ ಅವತಾರ ದ್ವಿಚಕ್ರ ವಾಹನ ಆಗಿದ್ದು ಸ್ಥಳದಲ್ಲಿ ವಾಹನ ಹಾಗೂ ಮುದ್ದೆ ಮಾಲನ್ನು ವಶಪಡಿಸಿಕೊಂಡು 1 ನೇ ಆರೋಪಿಯನ್ನು ದಸ್ತಗಿರಿ ಮಾಡಿ ಸ್ಥಳದಲ್ಲಿ ಮಾದರಿಗಾಗಿ ಜಪ್ತ ಪಡಿಸಿಕೊಂಡ ಎಲ್ಲಾ ಮದ್ಯವನ್ನು ರಸಾಯನಿಕ ಪರೀಕ್ಷೆಗಾಗಿ ಸದರಿ ಗೊಬ್ಬರ ಚೀಲದಿಂದ ಮಾದರಿ ತೆಗೆದು ದಾರ ಕಟ್ಟಿ ಅರಗ ಕಟ್ಟಿ ಸರ್ಕಾರಿ ಸೀಲ್ ನಿಂದ ಸೀಲ್ ಮಾಡಿ, ಸ್ಥಳದಲ್ಲಿ ಮಾದರಿ ಚೀಟಿ ಹಾಗೂ ಮಾದರಿ ಮೊಹರಿನ ಚೀಟಿ ತಯಾರಿಸಿ ಪಂಚರ ಹಾಗೂ ಅವರ ಸಹಿ ಪಡೆದು ಸದರಿ ಮುದ್ದೆ ಮಾಲಿಗೆ ಅಂಟಿಸಲಾಯಿತು. ಸ್ಥಳದಲ್ಲಿ ವಿವರವಾದ ಪಂಚನಾಮೆಯನ್ನು ಮಧಾಹ್ನ 12-30 ರಿಂದ 1-30 ಗಂಟೆಯ ವರೆಗೆ ಮಾಡಲಾಯಿತು. ಕಚೇರಿಗೆ ಬಂದು 1 ನೇ ಆರೋಪಿಯ ವಿರುದ್ದ ಗಣಕೀಕೃತ ದೂರನ್ನು ತಯಾರಿಸಿ, 1 ನೇ ಆರೋಪಿಯ ವಿರುದ್ಧ ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಲಾಯಿತು. ನಂತರ 1 ನೇ ಆರೋಪಿಯನ್ನು ದಸ್ತಗಿರಿ ಮಾಡಿ, ದಸ್ತಗಿರಿ ನಿಯಮ ಪಾಲಿಸಿ, ದಸ್ತಗಿರಿ ಮಾಡಿದ 1 ನೇ ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಫ್ರಾಸಾ-4 ಸಿದ್ದಪ್ಪ ಉಡಚಪ್ಪ ಹಿರೇತನದರವರು ಅಬಕಾರಿ ಮುಖ್ಯ ಪೇದೆ ಇದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:25-04-2023 ರಂದು ವಿಧಾನಸಭಾ ಚುನಾವಣೆ ನಿಮಿತ್ಯ ನೀತಿ ಸಂಹಿತೆ ಜಾರಿಯಲ್ಲಿದ್ದಾಗ ಮೇಲಾಧಿಕಾರಿಗಳ ಆದೇಶದ ಮೇರೆಗೆ ಅಪರಾಧ ಪತ್ತೆ ಹಚ್ಚುವ ನಿಟ್ಟಿನಲ್ಲಿ ಮುಂಜಾನೆ 11-30 ಗಂಟೆ ಸುಮಾರಿಗೆ ಚಾಸಾ-1 ರವರೊಂದಿಗೆ ಅವರು ಹಾಗೂ ಚಾಸಾ-5 ರವರೊಂದಿಗೆ ಕೂಡಿ ಸರ್ಕಾರಿ ವಾಹನ ನಂ. ಕೆಎ-26-ಜಿ-0391 ನೇದ್ದಲ್ಲಿ ಗದಗ ಬೆಟಗೇರಿಯಲ್ಲಿ ಗಸ್ತು ಮಾಡುತ್ತಿರುವಾಗ ಬೆಳಗ್ಗೆ 11-45-ಗಂಟೆಗೆ ಚಾಸಾ-1 ರವರಿಗೆ ಬಾತ್ಮಿ ಬಂದಿದ್ದು, ಗಂಗಾಪೂರ ಪೇಟೆಯಲ್ಲಿ 1 ನೇ ಆರೋಪಿ ಸಂದೀಪ ಶಿವಾನಂದ ಚೆನ್ನೂರ ಎಂಬುವವನು ಅಕ್ರಮವಾಗಿ ತನ್ನ ದ್ವಿಚಕ್ರ ವಾಹನದಲ್ಲಿ ಮದ್ಯ ಸಾಗಾಟ ಮಾಡುತ್ತಿರುವ ಕುರಿತು ಬಾತ್ಮಿ ಬಂದ ಮೇರೆಗೆ ನಂತರ ಚಾಸಾ 1 ರವರು ಗಾಂಧಿ ಸರ್ಕಲ್ ಬಸ್ಸ ನಿಲ್ದಾಣದ ಹತ್ತಿರ ನಿಂತಿದ್ದ ಚಾಸಾ-2 ಮತ್ತು 3 ಇಬ್ಬರು ಪಂಚರನ್ನು ಕರೆಸಿ, ಅವರಿಗೆ

ಬಾತ್ಮಿ ಸಂಗತಿ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದಾಗ ಸದರಿಯವರು ಒಪ್ಪಿದ್ದರಿಂದ ಚಾಸಾ-1 ರವರು, ಸದರಿಯವರಿಗೆ ಪಂಚರ ನೋಟಿಸು ನೀಡಿದರು. ಪಂಚರೊಂದಿಗೆ ಸೇರಿಕೊಂಡು ಬಾತ್ಮಿ ಬಂದ ಸ್ಥಳವಾದ ಗಂಗಾಪೂರ ಪೇಟೆ ಬಸ್ಸ ನಿಲ್ದಾಣದ ಹತ್ತಿರ 12-00 ಗಂಟೆಗೆ ರಸ್ತೆ ಗಾವಲು ನಿರ್ವಹಿಸುತ್ತಿರುವಾಗ ಗಂಗಾಪೂರ ಪೇಟೆಯಿಂದ ಒಂದು ದ್ವಿಚಕ್ರ ವಾಹನ ಅವರ ಹತ್ತಿರ ಬರುತ್ತಿದ್ದು ಸದರಿ ವಾಹನ ತಡೆದು ನಿಲ್ಲಿಸಲು ಪ್ರಯತ್ನಿಸುತ್ತಿದ್ದಂತೆ 1 ನೇ ಆರೋಪಿ ಓಡಲು ಪ್ರಯತ್ನಿಸುತ್ತಿರುವಾಗ 1 ನೇ ಆರೋಪಿಯನ್ನು ಚಾಸಾ 1 ಹಾಗೂ ಚಾಸಾ 5 ರವರು ಹಿಡಿದು ತಡೆದು ನೀಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಫ್ರಾಸಾ-4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಸದರಿ ವಾಹನ ತಪಾಸಣೆ ಮಾಡುವ ಅವಶ್ಯಕತೆ ಕಂಡುಬಂದಿದ್ದರಿಂದ ಸ್ಥಳದಲ್ಲಿ ಪಂಚರ ಸಮಕ್ಷಮ ಚಾಸಾ-1 ರವರು ಶೋಧನಾ ಸಮುಚ್ಚಿತ ಆಧಾರ ತಯಾರಿಸಿಕೊಂಡು ಸದರಿ ವಾಹನ ತಪಾಸಣೆ ಮಾಡಲು ಪ್ರಾರಂಬಿಸಿದಾಗ ಸದರಿ ವಾಹನದಲ್ಲಿ 1-ಗೊಬ್ಬರ ಚೀಲ ಇತ್ತು ಅದನ್ನು ತೆಗೆದು ನೋಡಿದಾಗ ಅದರಲ್ಲಿ 90 ಎಂ.ಎಲ್ ನ 5- ಹೈವರ್ಡ್ಸ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕೆಟ್ ಗಳು ಹಾಗೂ 90 ಎಂ.ಎಲ್ ನ ಓರಿಜನಲ್ ಚಾಯ್ಸ 50 ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡು ಬಂದಿತು. ಸದರಿ ದ್ವಿಚಕ್ರ ವಾಹನದ ನಂಬರ ನಮೂದು ಇಲ್ಲದ ಕಾರಣ ಬಜಾಜ ಕಂಪನಿಯ ಅವತಾರ ದ್ವಿಚಕ್ರ ವಾಹನ ಆಗಿದ್ದು ಸ್ಥಳದಲ್ಲಿ ವಾಹನ ಹಾಗೂ ಮುದ್ದೆ ಮಾಲನ್ನು ವಶಪಡಿಸಿಕೊಂಡು 1 ನೇ ಆರೋಪಿಯನ್ನು ದಸ್ತಗಿರಿ ಗೊಳಿಸಿ ಸ್ಥಳದಲ್ಲಿ ಮಾದರಿಗಾಗಿ ಜಪ್ತ ಪಡಿಸಿಕೊಂಡ ಎಲ್ಲಾ ಮದ್ಯವನ್ನು ರಸಾಯನ ಪರೀಕ್ಷೆಗಾಗಿ ಸದರಿ ಗೊಬ್ಬರ ಚೀಲದಿಂದ ಮಾದರಿ ತೆಗೆದು ದಾರ ಕಟ್ಟಿ, ಅರಗ ಕಟ್ಟಿ ಸರ್ಕಾರಿ ಸೀಲ್ ನಿಂದ ಸೀಲ್ ಮಾಡಿ, ಸ್ಥಳದಲ್ಲಿ ಮಾದರಿ ಚೀಟಿ ಹಾಗೂ ಮಾದರಿ ಮೊಹರಿನ ಚೀಟಿ ತಯಾರಿಸಿ ಪಂಚರ ಹಾಗೂ ಅವರ ಸಹಿ ಪಡೆದು ಸದರಿ ಮುದ್ದೆ ಮಾಲಿಗೆ ಅಂಟಿಸಲಾಗಿಯಿತ್ತು. ಸ್ಥಳದಲ್ಲಿ ವಿವರವಾದ ಪಂಚನಾಮೆಯನ್ನು ಮಧಾಹ್ನ 12-30 ರಿಂದ 1-30 ಗಂಟೆಯ ವರೆಗೆ ಮಾಡಲಾಯಿತು. ಚಾಸಾ-1 ರವರು ಕಚೇರಿಗೆ ಬಂದು 1 ನೇ ಆರೋಪಿ ವಿರುದ್ದ ಗಣಕೀಕೃತ ದೂರನ್ನು ತಯಾರಿಸಿ, ಸರ್ಕಾರದ ತರ್ಫೆ ದೂರನ್ನು ನೀಡಿರುತ್ತಾರೆ. ನಂತರ ಅವರು ಚಾಸಾ-9 ರವರಿಗೆ ದಿಃ 04-07-2023 ರಂದು ಅವರ ಹೇಳಿಕೆಯನ್ನು ನೀಡಿರುತ್ತಾರೆ. ಗೈರು ಹಾಜರು ಇರುವ 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತಾರೆ. ಈ ಹಂತದಲ್ಲಿ 1 ನೇ ಆರೋಪಿಯ ಪರ ವಕೀಲರು ಅವರನ್ನು ಗುರುತಿಸುವಿಕೆಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿದಾರರು ಮು.ಮಾ 1 ನೋಡಿ ಗುರುತಿಸಿರುತ್ತಾರೆ. ನಿಪಿಃ1 ಪಂಚನಾಮೆಯಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ-1 ಬಿ ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14.** ಪ್ರಾಸಾ-5 ನೇತ್ರಾ ನಾಗಪ್ಪ ಉಪ್ಪಾರ ರವರು ಅಬಕಾರಿ ನಿರೀಕ್ಷಕರಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 18-05-2023 ರಂದು ಅಬಕಾರಿ ನಿರೀಕ್ಷಕರು ಅಬಕಾರಿ ಉಪ ಆಯುಕ್ತರ ಕಚೇರಿ ಗದಗ ಜಿಲ್ಲೆ ಇವರಿಂದ ಸದರಿ ಪ್ರಕರಣದ ಕಡತವನ್ನು ಪಡೆದು ದಿಃ 03-06-2023 ರಂದು ಸದರಿ ಪ್ರಕರಣದ ತನಿಖೆಯನ್ನು ರಸಾಯನಿಕ ಪರೀಕ್ಷೆ ಮಾದರಿಗಾಗಿ ಸ್ಯಾಂಪಲ್‌ಗಳನ್ನು ಚಾಸಾ-6 ಇವರ ಮೂಲಕ ರಸಾಯನಿಕ ಪರೀಕ್ಷೆಗಾಗಿ ಧಾರವಾಡ ವಿಭಾಗ ಇವರಿಗೆ ಕಳುಹಿಸಿರುತ್ತಾರೆ. ನಂತರ ದಿಃ05-06-2023 ರಂದು ಈ ಬಗ್ಗೆ ಚಾಸಾ-6 ರವರ ಹೇಳಿಕೆ ಪಡೆದುಕೊಂಡಿರುತ್ತಾರೆ. ದಿಃ 06-06-2023 ರಂದು ಆರ್.ಟಿ.ಓ ಗದಗ ಇವರಿಗೆ ಸದರಿ ಪ್ರಕರಣದಲ್ಲಿ ಜಪ್ತಾದ ವಾಹನ ಬಿ.ಎಕ್ಸಟ್ರಾಕ್ಟ ವರದಿಯನ್ನು ನೀಡುವಂತೆ ಕೋರಿ ಪತ್ರ ಬರೆದಿರುತ್ತಾರೆ ಸದರಿಯವರು ದಿಃ 20-06-2023 ರಂದು ತಮ್ಮಲ್ಲಿ ಸದರಿ ವಾಹನದ ಬಗ್ಗೆ ಅವರ ಕಚೇರಿಯಲ್ಲಿ ದಾಖಲಾತಿಗಳು ಇಲ್ಲಾ ಎಂದು ವರದಿ ನೀಡಿರುತ್ತಾರೆ. ಸದರಿ ದಿನ ದಂದು ರಸಾಯನಿಕ ವರದಿಯನ್ನು ಚಾಸಾ-7 ಇವರ ಮೂಲಕ ಸ್ವೀಕರಿಸಿರುತ್ತಾರೆ. ಅದೇ ದಿನ ಚಾಸಾ-7 ರವರ ಹೇಳಿಕೆ ಪಡೆದುಕೊಂಡಿರುತ್ತಾರೆ. ನಂತರ ದಿಃ 26-06-2023 ರಂದು ಶಿವಾನಂದ ಮೋಟಾರ್ಸ ಗದಗ ಇವರಿಗೆ ಸದರಿ ವಾಹನ ಮಾಲೀಕನ ಹೆಸರು ಮತ್ತು ವಿಳಾಸ ಒದಗಿಸುವಂತೆ ಪತ್ರ ಬರೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ

**15.** ಪ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳಿರುವುದೇನೆಂದರೆ, ದಿಃ 25-03-2021 ರಂದು ಎಂ. ವಿ. ಐ. ವರದಿ ಪಡೆದಿರುತ್ತಾರೆ. ಸದರಿಯವರು ದಿಃ 04-07-2023 ರಂದು ತಮ್ಮ ವರದಿಯಲ್ಲಿ ಸದರಿ ವಾಹನವನ್ನು ಪದ್ಮಾ ಬಿ ಬೆಳದಡಿ ಜವಳಿಗಲ್ಲಿ ಗಂಗಾಪೂರ ಪೇಟೆ ಗದಗ ಇವರಿಗೆ ದಿಃ 26-04-2011 ರಂದು ಮಾರಾಟ ಮಾಡಿರುವ ಬಗ್ಗೆ ವರದಿಯನ್ನು ನೀಡಿರುತ್ತಾರೆ. ಸದರಿ ದಿನದಂದು ದಾಳಿಯಲ್ಲಿ ಭಾಗವಹಿಸಿದ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಂತರ ದಿಃ 07-07-2023 ರಂದು ವಾಹನದ ಮಾಲೀಕರಾದ ಪದ್ಮಾ ಬಿ ಬೆಳದಡಿ ಇವರಿಗೆ ತನಿಖಾಧಿಕಾರಿಗಳ ಮುಂದೆ ಹಾಜರಾಗುವಂತೆ ನೋಟೀಸು ನೀಡಿರುತ್ತಾರೆ. ನಂತರ ಸದರಿಯವರು 1-ವಾರ ಕಳೆದು ಅವರ ಮುಂದೆ ಹಾಜರಾಗಲು ಬರಲಿಲ್ಲ, ಕಾರಣ 1 ಮತ್ತು 2 ನೇ ಆರೋಪಿತರ ವಿರುದ್ದ ಸಾಕಷ್ಟು ಅಪರಾಧ ಎಸಗಿದ ಬಗ್ಗೆ ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ದಿಃ 28-07-2023 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ. ಗೈರು ಹಾಜರು ಇರುವ 1 ಮತ್ತು 2 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತಾರೆ. ಈ ಹಂತದಲ್ಲಿ 1 ಮತ್ತು 2 ನೇ ಆರೋಪಿತರ ಪರ ವಕೀಲರು ಗೈರು ಹಾಜರು ಇರುವ ಆರೋಪಿತರನ್ನು ಗುರುತುವಿಕೆಗೆ ತಕರಾರು ಇರುವುದಿಲ್ಲಾ ಎಂದು ಹೇಳಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**16.** ಈ ಪ್ರಕರಣದ ಪಂಚನಾಮೆ ಸಾಕ್ಷಿದಾರರು ಎಂದು ಹೇಳಲಾದ ಪ್ರಾಸಾ-1 ಮತ್ತು 2 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ.

**17.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1, 4 ಮತ್ತು 5 ರವರುಗಳು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣ ಪೂರಕವಾಗಿ ಸಾಕ್ಷ್ಯ ನುಡಿದಿರುವುದರಿಂದ 1 ಮತ್ತು 2 ನೇ ಆರೋಪಿತರ ಮೇಲೆ ಮಾಡಲಾಗಿರುವ ದೋಷಾರೋಪಣೆ ಸಾಭೀತು ಆಗಿದ್ದು 1 ಮತ್ತು 2 ನೇ ಆರೋಪಿತರನ್ನು ಶಿಕ್ಷೆಗೆ ಗುರಿಪಡಿಸುವಂತೆ ವಾದ ಮಂಡಿಸಿರುತ್ತಾರೆ.

**18.** 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ.ಐ.ಎ.ಬೇಪಾರಿ ಮತ್ತು ಟಿ.ಎನ್. ಭಾಂಡಗೆ ವಕೀಲರು ಈ ಪ್ರಕರಣದಲ್ಲಿ ಬಹುಮುಖ್ಯ ಸಾಕ್ಷಿದಾರರಾದ ಪ್ರಾಸಾ-3 ರಿಂದ 5 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಪೋಲಿಸ್ ಅಧಿಕಾರಿಗಳು ಹಾಗೂ ಸಿಬ್ಬಂಧಿಯಾದ ಪ್ರಾಸಾ-3 ರಿಂದ 5 ರವರು ಕೇವಲ ಚುನಾವಣ ಸಮಯದಲ್ಲಿ ತಮ್ಮ ಇಲಾಖಾ ಅಂಕಿಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿದಿರುತ್ತಾರೆ ಆದ್ದರಿಂದ ಆರೋಪಿತರನ್ನು ಬಿಡುಗಡೆ ಮಾಡುವಂತೆ ಕೋರಿಕೊಂಡಿರುತ್ತಾರೆ.

**19.** ಮೇಲ್ಕಂಡ ಮೌಖಿಕ ಸಾಕ್ಷ್ಯ ಹಾಗೂ ಅಭಿಯೋಜನೆಯ ಪರವಾಗಿ ಹಾಜರು ಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಈ ಪ್ರಕರಣದಲ್ಲಿ 1 ನೇ ಆರೋಪಿ ಕರ್ನಾಟಕ ರಾಜ್ಯ ವಿಧನಸಭಾ ಚುನಾವಣೆ-2023 ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಸಮಯದಲ್ಲಿ ದಿನಾಂಕ 25.04.2023 ರಂದು ಗದಗ ವಿಧಾಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗದಗ ಬೆಟಗೇರಿ ಶಹರದ ಗಂಗಾಪೂರ ಬಸ್ ನಿಲ್ದಾಣದ ಹತ್ತಿರ ರಸ್ತೆಗಾವಲು ನಿರ್ವಹಿಸುತ್ತಿರುವಾಗ ಮಧ್ಯಾಹ್ನ 12-30 ಗಂಟೆಯ ಯಾವುದೇ ಪಾಸ್ ವ ಪರ್ಮಿಟ್ ಇಲ್ಲದೇ ತನ್ನ ಬೈಕಿನಲ್ಲಿ ಅಕ್ರಮ ಮದ್ಯ ಇಟ್ಟುಕೊಂಡು ಅದನ್ನು ಮಾರಾಟ ಮಾಡುವ ಉದ್ದೇಶದಿಂದ ತೆಗೆದುಕೊಂಡು ಹೋಗುತ್ತಿದ್ದರು ಎಂಬುದಾಗಿ ಆರೋಪ ಮಾಡಲಾಗಿದೆ.

**20.** ಈ ಪ್ರಕರಣದಲ್ಲಿ 1 ನೇ ಆರೋಪಿಯ ವಶದಿಂದ ಮದ್ಯ ದಾಸ್ತಾನು ಜಪ್ತಿ ಮಾಡಿಕೊಳ್ಳಲಾಗಿದ್ದು ಎಂಬುದನ್ನು ರುಜುವಾತು ಮಾಡುವುದು ಬಹು ಮುಖ್ಯವಾಗಿರುತ್ತದೆ. ನಿಪಿ-1 ರ ಪಂಚನಾಮೆಯ ಅಡಿಯಲ್ಲಿ ಗುನ್ಹಾ ಸ್ಥಳದಲ್ಲಿ ಪಂಚರಾದ ಫ್ರಾಸಾ-1 ಮತ್ತು 2 ರವರ ಸಮಕ್ಷಮ ಮದ್ಯ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಈ ಪ್ರಕರಣದಲ್ಲಿ ಫ್ರಾಸಾ-1 ಮತ್ತು 2 ರವರು ಅಭಿಯೋಜನೆಯ ಪ್ರಮುಖ ಸಾಕ್ಷಿದಾರರಿರುತ್ತಾರೆ. ಆದರೆ ಸದರಿ ಇಬ್ಬರೂ ಸಾಕ್ಷಿದಾರರು ಸಹ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ.

**21.** ಫ್ರಾಸಾ-1 ಮತ್ತು 2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅವರು ಜಪ್ತು ಪಂಚನಾಮೆಯ ಮೇಲೆ ಅವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯಲ್ಲಿ ಇರುವ ವಿಷಯ ಅವರಿಗೆ ಗೊತ್ತಿಲ್ಲ. ಚಾಸಾ-1 ಮತ್ತು 3 ರವರ ಪರಿಚಯ ಇರುವುದಿಲ್ಲ. ಅವರು ಸದರಿ ಪಂಚನಾಮೆಗೆ ಸುಮಾರು 1 ವರ್ಷದ ಹಿಂದೆ ಸಹಿ ಮಾಡಿರುತ್ತಾರೆ. ಸದರಿ ಸಹಿಯನ್ನು ಗಾಂಧಿ ಸರ್ಕಲನಲ್ಲಿ ಮಾಡಿರುತ್ತಾರೆ. ಪಂಚನಾಮೆಗೆ ಸಹಿ ಮಾಡುವಾಗ ಅವರ ಜೊತೆ ಯಾರು ಇರಲಿಲ್ಲ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ಈ ಮುಂಚೆ ನೋಡಿರುವುದಿಲ್ಲ. ಸಾಕ್ಷಿದಾರರು ಮಾದರಿ ಮೊಹರಿನ ಚೀಟಿಯ ಮೇಲೆ ಅವರ ಸಹಿಯನ್ನು ಗುರುತಿಸಿದ್ದರಿಂದ ಸದರಿ ಮೊಹರಿನ ಚೀಟಿ ನಿಪಿ-2 ಮತ್ತು ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು ಎಂಬುದಾಗಿ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ. ಸದರಿ ಇಬ್ಬರು ಸಾಕ್ಷಿದಾರರನ್ನು ಅಭಿಯೋಜನೆಯ ಪರವಾಗಿ ಪಾಟಿ ಸವಾಲಿಗೆ ಒಳಪಡಿಸಿದರು ಸಹಾ ಪ್ರಕರಣಕ್ಕೆ ಅನುಕೂಲವಾಗುವ ಯಾವುದೇ ಅಂಶವನ್ನು ಹೊರಗೆಡವಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ನಿಪಿ-1 ರ ಪಂಚನಾಮೆಯನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿದೆ ಎಂಬುದು ಈ ನ್ಯಾಯಾಲಯ ಅಭಿಪ್ರಾಯವಾಗಿದೆ.

**22.** ಈ ಪ್ರಕರಣದಲ್ಲಿ ಅಬಕಾರಿ ನಿರೀಕ್ಷಕರು ಮತ್ತು ಸಿಬ್ಬಂದಿಯಾದ ಫ್ರಾಸಾ-3 ರಿಂದ 5 ರವರನ್ನು ಹೊರತು ಪಡಿಸಿ ಬೇರೆ ಯಾವುದೇ ಸ್ವತಂತ್ರ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಆದ್ದರಿಂದ ಕೇವಲ ಇಲಾಖಾ ಅಧಿಕಾರಿಗಳ ಹೇಳಿಕೆಗಳನ್ನು ಆಧಾರಿಸಿ 1 ಮತ್ತು 2 ನೇ ಆರೋಪಿತರನ್ನು ಶಿಕ್ಷೆಗೆ ಗುರಿಪಡಿಸುವುದು ಸಮಂಜಸವಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.

**23.** ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರಡಿ ಆಪಾಧನೆ ಸಾಭೀತುಗೊಳ್ಳಬೇಕಾದರೆ ಅಭಿಯೋಜನೆಯವರು ಆರೋಪಿ ಮದ್ಯ ದಾಸ್ತಾನು ಹೊಂದಿದ್ದ ಮುಖ್ಯ ಸಂಗತಿಯನ್ನು ಸಾಭೀತು

ಪಡಿಸಬೇಕಾಗುತ್ತದೆ. ಸದರಿ ಸಂಗತಿ ಸಾಭೀತುಗೊಂಡಲ್ಲಿ ಕಲಂ 40 ಅಬಕಾರಿ ಕಾಯ್ದೆಯಡಿ ಪೂರ್ವ ಭಾವನೆ ಹೊಂದಬಹುದಾಗಿದೆ. ಕಾರಣ ಅಭಿಯೋಜನೆಯವರು ಆರೋಪಿಯ ಹತ್ತಿರ ಮದ್ಯ ದಾಸ್ತಾನು ಇತ್ತು ಎಂಬುದನ್ನು ಯಾವುದೇ ಸಂಶಯಗಳಿಗೆ ಎಡೆ ಇಲ್ಲದಂತೆ ಸಾಭೀತು ಮಾಡಬೇಕಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಇಬ್ಬರೂ ಪಂಚ ಸಾಕ್ಷಿದಾರರು ಸಹ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜನೆಯು ನಿ.ಪಿ.3ರ ಜಪ್ತು ಪಂಚನಾಮೆ ರುಜುವಾತು ಪಡಿಸುವಲ್ಲಿ ವಿಫಲವಾಗಿರುವುದು ಕಂಡು ಬರುತ್ತದೆ.

**24.** ಈ ಎಲ್ಲಾ ಕಾರಣಗಳಿಂದಾಗಿ ಈ ನ್ಯಾಯಾಲಯವು ಅಭಿಯೋಜನೆಯ ಪ್ರಕರಣವು ಸಾಕಷ್ಟು ಅನುಮಾನಗಳಿಂದ ಕೂಡಿದ್ದು ಅದರ ಲಾಭವನ್ನು 1 ಮತ್ತು 2 ನೇ ಆರೋಪಿತರು ಪಡೆಯಲು ಅರ್ಹರಾಗಿರುತ್ತಾರೆ ಎಂಬ ಅಭಿಪ್ರಾಯಕ್ಕೆ ಬಂದಿರುತ್ತದೆ. ಅಭಿಯೋಜನೆಯು 1 ಮತ್ತು 2 ನೇ ಆರೋಪಿತರ ವಿರುದ್ಧ ಮಾಡಲಾದ ಆಪಾದನೆಯನ್ನು ಸಂಶಯಾತೀತವಾಗಿ ರುಜುವಾತು ಪಡಿಸುವಲ್ಲಿ ಈ ಮೇಲೆ ಹೇಳಿದ ಕಾರಣಗಳಿಂದ ವಿಫಲವಾಗಿರುವುದರಿಂದ 1ನೇ ಅಂಶವನ್ನು ನಕರಾತ್ಮಕವಾಗಿ ತೀರ್ಮಾನಿಸಲಾಗಿದೆ.

**25.** ಅಂಶ 2 ಃ ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಕಂಡ ಃ

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ 1 ಮತ್ತು 2 ನೇ ಆರೋಪಿತರನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧದಿಂದ ಬಿಡುಗಡೆಗೊಳಿಸಲಾಗಿದೆ.

1 ಮತ್ತು 2 ನೇ ಆರೋಪಿತರು ಮತ್ತು ಅವರ ಜಾಮೀನುದಾರರ ಮುಚ್ಚಳಿಕೆ ಪತ್ರಗಳು 6 ತಿಂಗಳ ಅವಧಿ ಮುಗಿದ ನಂತರ ರದ್ದುಗೊಳ್ಳುವಂತೆ ಆದೇಶಿಸಲಾಗಿದೆ.

ವಶಪಡಿಸಿಕೊಂಡಿರುವ ಮು.ಮಾ. 1 ರಲ್ಲಿರುವ ಮಧ್ಯದ ಖಾಲಿ ಬಾಟಲಿಗಳು ಮೌಲ್ಯ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ರಹಿತವಾಗಿರುವುದರಿಂದ ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ, ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ **05ನೇ ನವೆಂಬರ್ 2024** ರಂದು ತೀರ್ಪನ್ನು ಘೋಷಿಸಲಾಯಿತು).

DIPTI B NADGAUDA
Digitally signed by DIPTI B NADGAUDA
Date: 2024.11.14 15:25:46 +0530

(ಶ್ರೀಮತಿ. ದೀಪ್ತಿ ನಾಡಗೌಡ)
1 ನೇ ಅಧಿಕ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., 1 ನೇ ನ್ಯಾಯಾಲಯ, ಗದಗ

## ಅನುಬಂಧ

1. ಅಭಿಯೋಜನೆಯವರ ಪರ ಸಾಕ್ಷಿದಾರರ ಪಟ್ಟಿ:

| | | |
|---|---|---|
| ಪ್ರಾಸಾ-1 | : | ಅನಿಸಅಹಮ್ಮದ ಕೊಪ್ಪಳ |
| ಪ್ರಾಸಾ-2 | : | ರಾಜೇಸಾಬ ಮೊದ್ಲೇಖಾನ |
| ಪ್ರಾಸಾ-3 | : | ಶಹನಾಜ ಬೇಗಂ ವೈ.ಕೆ. ವಡಗೇರಿ |
| ಪ್ರಾಸಾ-4 | : | ಸಿದ್ದಪ್ಪ ಹಿರೇತನದ |
| ಪ್ರಾಸಾ-5 | : | ನೇತ್ರಾ ಉಪ್ಪಾರ |

2. ಅಭಿಯೋಜನೆಯವರ ಪರ ದಾಖಲೆಗಳ ಪಟ್ಟಿ:

| | | |
|---|---|---|
| ನಿಪಿ-1 | : | ಪಂಚನಾಮ |
| ನಿಪಿ-1(ಎ) ರಿಂದ (ಡಿ) | : | ಪ್ರಾಸಾ-1 ರಿಂದ 4 ರವರ ಸಹಿಗಳು |
| ನಿಪಿ-2 | : | ಮಾದರಿ ಮೊಹರಿನ ಚೀಟಿ |

| | | |
|---|---|---|
| ನಿಪಿ-2(ಎ) | : | ಪ್ರಾಸಾ-1 ರವರ ಸಹಿ |
| ನಿಪಿ-2(ಬಿ) | : | ಪ್ರಾಸಾ-2 ರವರ ಸಹಿ |
| ನಿಪಿ-2(ಸಿ) | : | ಪ್ರಾಸಾ-3 ರವರ ಸಹಿ |
| ನಿಪಿ-3 | : | ಶೋಧನ ಸಮುಚಿತ ಆಧಾರ |
| ನಿಪಿ-3(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-4 | : | ಚಾಸಾ-2 ಮತ್ತು ರವರಿಗೆ ನೀಡಿದ ನೋಟಿಸು |
| ನಿಪಿ-4(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-5 | : | ದೂರು |
| ನಿಪಿ-5(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-6 | : | ಪ.ವ.ವರದಿ |
| ನಿಪಿ-6(ಎ)(ಬಿ) | : | ಪ್ರಾಸಾ-3 ರವರ ಸಹಿಗಳು |
| ನಿಪಿ-7 | : | ಟೆಟ್ರಾ ಪ್ಯಾಕೇಟ ಮೇಲೆ ಅಂಟಿಸಿದ ಚೀಟಿ |
| ನಿಪಿ-7(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-8 | : | ಬಂಧನ ತಿಳುವಳಿಕೆ ಪತ್ರ |
| ನಿಪಿ-8(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-9 | : | ರಿಮಾಂಡ್ ಯಾದಿ |
| ನಿಪಿ-9(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-10 | : | ಪ್ರಾದೇಶಿಕ ಸಹಾಯಕ ರಾಸಾಯನಿಕ ಧಾರವಾಡರವರಿಗೆ ಕಳುಹಿಸಿದ ಪತ್ರ |
| ನಿಪಿ-10(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-11 | : | ರಾಸಾಯನಿಕ ಪರೀಕ್ಷಾ ವರದಿ |
| ನಿಪಿ-11(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-12 | : | ಹಿಂಬರಹದ ದಾಖಲೆ |
| ನಿಪಿ-12(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-13 | : | ಶಾಂತೇಶ್ ಹೋಂಡಾ ಹುಬ್ಬಳ್ಳಿಯಲ್ಲಿ ಬರೆದ ಪತ್ರ |
| ನಿಪಿ-13(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-14 | : | ಶಾಂತೇಶ್ ಹೋಂಡಾರವರು ಮರಳಿ ಬರೆದ ಪತ್ರ |
| ನಿಪಿ-14(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-15 | : | ಪ್ರಾದೇಶಿಕ ಸಾರಿಗೆ ಅಧಕಾರಿಗಳು ಗದಗ ರವರಿಗೆ ಕಳುಹಿಸಿದ ಪತ್ರ |
| ನಿಪಿ-15(ಎ) | : | ಪ್ರಾಸಾ-3 ರವರ ಸಹಿ |
| ನಿಪಿ-16 | : | ಹಿಂಬರದ ದಾಖಲೆ |
| ನಿಪಿ-16(ಎ) | : | ಪ್ರಾಸಾ-3 ರವರ ಸಹಿ |

3. ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿಃ

ಮು.ಮಾ.1 : **ಟೆಟ್ರಾ ಪ್ಯಾಕೇಟುಗಳು**

4. ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿದಾರರುಃ

- ಇಲ್ಲ -

5. ಆರೋಪಿತರ ಪರ ದಾಖಲೆಗಳ ಪಟ್ಟಿಃ

- ಇಲ್ಲ –

DIPTI B NADGAUDA
Digitally signed by DIPTI B NADGAUDA
Date: 2024.11.14 15:25:53 +0530

(ಶ್ರೀಮತಿ. ದೀಪ್ತಿ ನಾಡಗೌಡ)
1 ನೇ ಅಧಿಕ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., 1 ನೇ ನ್ಯಾಯಾಲಯ, ಗದಗ